ಗಣಕಯಂತ್ರಗಳ ಪೂರೈಕೆ

1413(1690); ಶ್ರೀ ಕೋನರೆಡ್ಡಿ ಎನ್.ಎಚ್. (ನವಲಗುಂದ)

ಅ) ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಗಣಕಯಂತ್ರಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಇದುವರೆವಿಗೂ ಎಷ್ಟು ಗಣಕಯಂತ್ರಗಳನ್ನು ನೀಡಲಾಗಿದೆ (ವಿವರಗಳನ್ನು ನೀಡುವುದು)

ಇ) ಮೇಲ್ಕಂಡ ಶಾಲಾ ಕಾಲೇಜುಗಳಲ್ಲಿ ಗಣಕಯಂತ್ರಗಳನ್ನು ಅಳವಡಿಸಲು ಸರ್ಕಾರ ನಿಗಧಿಪಡಿಸಿರುವ ಅನುದಾನದ ಮೊತ್ತ ಎಷ್ಟು (ವಿವರಗಳನ್ನು ನೀಡುವುದು)

ಈ) ಮೇಲ್ಕಂಡ ಶಾಲಾ ಕಾಲೇಜುಗಳಲ್ಲಿ ಗಣಕ ಯಂತ್ರಗಳನ್ನು ಅಳವಡಿಸಲು ಯಾವ ಸಂಸ್ಥೆಗೆ ವಹಿಸಲಾಗಿದೆ ಮತ್ತು ಎಷ್ಟು ಮೊತ್ತಕ್ಕೆ ಗುತ್ತಿಗೆ ನೀಡಲಾಗಿದೆ (ವಿವರಗಳನ್ನು ನೀಡುವುದು)

ಉ) ಗುತ್ತಿಗೆಗೆ ನೀಡಿರುವ ಸಂಸ್ಥೆಗೆ ಸರ್ಕಾರ ಇದುವರೆವಿಗೂ ಪಾವತಿಸಿರುವ ಮೊತ್ತ ಎಷ್ಟು (ವಿವರಗಳನ್ನು ನೀಡುವುದು)

ಊ) ರಾಜ್ಯದಲ್ಲಿರುವ ಕೆಲವು ಶಾಲಾ ಕಾಲೇಜುಗಳಲ್ಲಿ ಗಣಕ ಯಂತ್ರಗಳು ಸಮರ್ಪಕವಾಗಿ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಋ) ಹಾಗಿದ್ದಲ್ಲಿ, ಗಣಕ ಯಂತ್ರಗಳನ್ನು ಪೂರೈಕೆ ಮಾಡಲು ಟೆಂಡರ್ ಪಡೆದ ಸಂಸ್ಥೆಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರಗಳನ್ನು ನೀಡುವುದು)

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇದೆ.

ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಗಣಕಯಂತ್ರಗಳನ್ನು ನೀಡುವ ಅವಕಾಶ ಯೋಜನೆಯಲ್ಲಿರುವುದಿಲ್ಲ.

ಆ)

ವರ್ಷ	ಪ್ರಾಥಮಿಕ ಶಾಲೆಗಳು	ಪ್ರೌಢಶಾಲೆಗಳು
2011–12	2095	–
2012–13	3010	–
2013–14	–	–

2014–15ನೇ ಸಾಲಿನಲ್ಲಿ 4396 ಪ್ರೌಢಶಾಲೆಗಳಲ್ಲಿ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಮೆ: ಕಿಯೋನಿಕ್ಸ್ ಸಂಸ್ಥೆಯವರಿಗೆ ನೀಡಿದ್ದು, ಸದರಿ ಸಂಸ್ಥೆಯವರು ಗಣಕಯಂತ್ರಗಳನ್ನು ಒದಗಿಸುವರು.

ಇ) ಪ್ರಾಥಮಿಕ ಶಾಲೆಯ ಕಂಪ್ಯೂಟರ್ ಸಹಾಯಿತ ಕಲಿಕೆ ಯೋಜನೆಗೆ ₹ 15.00 ಕೋಟಿಯನ್ನು ನಿಗಧಿಪಡಿಸಿದೆ.

ಕೇಂದ್ರ ಸರ್ಕಾರದ ಯೋಜನೆಯ ಐಸಿಟಿ ನಿಯಮಗಳಂತೆ ಪ್ರತಿ ಶಾಲೆಗೆ ಉಪಕರಣಗಳು, ಸಾಫ್ಟವೇರ್, ಇಂಟರ್‌ನೆಟ್, ಇತ್ಯಾದಿಗಳಿಗೆ ₹ 6.70 ಲಕ್ಷಗಳನ್ನು ನಿಗಧಿಪಡಿಸಿದೆ.

ವರ್ಷ	ಪ್ರಾಥಮಿಕ ಶಾಲೆಗಳು	ಪ್ರೌಢಶಾಲೆಗಳು
2011–12	ಮೆ: ಸಿದ್ಧಾರ್ಥ ಇನ್ಫೋಟೆಕ್ ಪ್ರೈ.ಲಿ. ಬೆಂ. : 419 ಶಾಲೆಗಳಿಗೆ ₹ 5.49 ಕೋಟಿಗಳಿಗೆ ಗುತ್ತಿಗೆ ನೀಡಲಾಗಿತ್ತು.	ಮೆ: ಕಿಯೋನಿಕ್ಸ್ ಸಂಸ್ಥೆ, ಬೆಂ.
2012–13	ಮೆ: ನೈನ್‌ರಿಚ್ ಇನ್ಫೋಟೆಕ್ ಪ್ರೈ.ಲಿ. ಬೆಂ. 602 ಶಾಲೆಗಳಿಗೆ ₹ 9.15 ಕೋಟಿಗಳಿಗೆ ಗುತ್ತಿಗೆ ನೀಡಲಾಗಿದೆ.	
2013–14	ಇರುವುದಿಲ್ಲ	

ಐಸಿಟಿ ಫೇಸ್–3 ಯೋಜನೆಯನ್ನು ನಿರ್ವಹಿಸಲು ಮೆ:ಕಿಯೋನಿಕ್ಸ್ ಸಂಸ್ಥೆಗೆ ವಹಿಸಲಾಗಿದ್ದು, ಯೋಜನಾ ಗಾತ್ರವನ್ನು ಐದು ವರ್ಷಗಳಿಗೆ ₹ 412.04 ಕೋಟಿಗಳಿಗೆ ನಿಗಧಿಮಾಡಿದೆ. (ತೆರಿಗೆ ವತ್ಯಾಸಗಳನ್ನು ಹೊರತುಪಡಿಸಿ)

ಊ) ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಮೇಲಿನ "ಈ" ನಲ್ಲಿ ತಿಳಿಸಿರುವಂತೆ ಪಾವತಿಸಲಾಗಿದೆ.

ಐಸಿಟಿ ಫೇಸ್–3 ಯೋಜನೆಯಡಿ ಕೊಠಡಿ ಪೂರ್ವ ಸಿದ್ದತೆಗಳಿಗಾಗಿ ₹ 19.70 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಕಾರ್ಯವು ಪೂರ್ಣಗೊಂಡಿದೆ.

ಋ) ಪ್ರಾಥಮಿಕ ಶಾಲೆಗಳಿಗೆ ಸಂಬಂಧಸಿದಂತೆ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.

ಐಸಿಟಿ 3 ಯೋಜನೆಯಲ್ಲಿ 2014–15ನೇ ಸಾಲಿನಿಂದ ಜಾರಿಗೆ ಬರುವಂತೆ 4396 ಶಾಲೆಗಳಲ್ಲಿ ಗಣಕಯಂತ್ರಗಳನ್ನು ಸರಬರಾಜು ಮಾಡುವುದು ಮೆ.ಕಿಯೋನಿಕ್ಸ್ ಸಂಸ್ಥೆಗೆ ವಹಿಸಲಾಗಿದ್ದು, ಯೋಜನಾ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಋ) ಉದ್ಭವಿಸುವುದಿಲ್ಲ.